'ಮಕ್ಕಳೆ, ನಮ್ಮ ಬೆರಳು ಅಕಸ್ಮಾತ್ ಕಣ್ಣನ್ನು ತಿವಿದರೆ ನಾವೇನೂ ಬೆರಳನ್ನು ಶಿಕ್ಷಿಸುವುದಿಲ್ಲ. ಬದಲಿಗೆ ಅದೇ ಬೆರಳಿನಿಂದ ಕಣ್ಣನ್ನು ಸವರಿಕೊಂಡು ಕಣ್ಣಿಗೆ ಸಾಂತ್ವನ ನೀಡುತ್ತೇವೆ. ಯಾಕೆಂದರೆ ಕೈಯ್ಯೂ ನಮ್ಮದೇ, ಕಣ್ಣೂ ನಮ್ಮದೇ. ಅದೇ ರೀತಿ, ನಾವು ಇತರರ ದೋಷಗಳನ್ನು ಮರೆತು ಎಲ್ಲರ ಒಳಿತಿಗಾಗಿ ಶ್ರಮಿಸಬೇಕು.'

ಯಾವುದೇ ಭಾಗದಲ್ಲಿರಲಿ, ಹಸಿವು ದಣಿವೆನ್ನದೆ ಅಹರ್ನಿಶಿ ಆಲಿಂಗನ ದರ್ಶನ ನೀಡುತ್ತಿರುವುದನ್ನು ಇಂದು ಇಡೀ ಜಗತ್ತು ಬೆರಗಿನಿಂದ ಅವಲೋಕಿಸುತ್ತಿದೆ.

'ಅಮ್ಮನ ದರ್ಶನ' ಎಂದರೆ, ಅಮ್ಮನನ್ನು ಕಣ್ಣಿನಲ್ಲಿ ನೋಡಿ ಹೋಗುವುದಲ್ಲ; ಅಮ್ಮನ ದರ್ಶನಕ್ಕೆ ಬಂದವರೆಲ್ಲಾ –ಸಾವಿರಸಾವಿರ ಸಂಖ್ಯೆಯಲ್ಲಿದ್ದರೂ ಸರಿ– ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಅಮ್ಮನ ಬಳಿಗೆ ಹೋಗಬಹುದು; ಅಮ್ಮನೇ ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವರು. ತಮ್ಮ ನಿಜಬಾಹುಗಳಲ್ಲಿ ನಮ್ಮನ್ನು ಬಳಸಿಕೊಂಡು, ತೋಳಿನಾಸರೆ ನೀಡುವರು; ತಲೆಯನ್ನು ತಮ್ಮ ಎದೆಗೆ ಆನಿಸಿಕೊಳ್ಳುವರು. ಕಿವಿಯಲ್ಲಿ ಸವಿಮಾತನ್ನು ಆಪ್ತವಾಗಿ ಪಿಸುಗುಡುವರು. ಕೆನ್ನೆಯ ಮೇಲೊಂದು ಮುತ್ತನಿಡುವರು; ಕೈಗೆ ಮಿಠಾಯಿ ಪ್ರಸಾದವನ್ನು ಮರೆಯದೇ ನೀಡುವರು. ಹೃದಯದಲ್ಲಿ ಆನಂದದ ಪುಳಕವಾಗುವುದು; ದಿವ್ಯಪ್ರೇಮದ ಸ್ಪರ್ಶಲಾಭ ನಮಗಾಗುವುದು! ಚರಿತ್ರೆಯು ಕಂಡು ಕೇಳರಿಯದ ಅಮೋಘ ದರ್ಶನ ಅನುಭೂತಿಯಿದು!

ಕಾರ್ಯಕ್ರಮವು ಯಾವುದೇ ಊರಿನಲ್ಲಿ, ಯಾವುದೇ ದೇಶದಲ್ಲಿ ಇರಲಿ –ಅಮ್ಮನ ಆಲಿಂಗನ ಸ್ಪರ್ಶಕ್ಕಾಗಿ ಜಗತ್ತಿನ ಎಲ್ಲೆಡೆಯ ಜನ ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಾರೆ. ಅಮ್ಮ ಪ್ರತಿಯೊಬ್ಬರ ಹೃದಯವನ್ನು ದಿವ್ಯಪ್ರೇಮದಿಂದ ಭರಿಸಿ ಉತ್ತಮ ಜೀವನಕ್ಕೆ ಪ್ರೇರಣೆ ನೀಡುತ್ತಾರೆ. ಆಧ್ಯಾತ್ಮದಲ್ಲಿ ಮಾರ್ಗದರ್ಶನ ಬಯಸುವವರಿಗೆ ಸಾಧನೆ ಕಲಿಸುತ್ತಾರೆ. 'ಆತ್ಮಸಾಕ್ಷಾತ್ಕಾರ ಪಡೆಯುವುದೇ ಮಾನವ ಜೀವನದ ಗುರಿ' ಎಂಬ ಸತ್ಯವನ್ನು ಎಲ್ಲರಿಗೂ ತಿಳಿಸಿಕೊಡುತ್ತಾರೆ.

ಅಮ್ಮ ದಿನಕ್ಕೆ 12–14 ತಾಸು ಕುಳಿತಲ್ಲೇ ಕುಳಿತು ದರ್ಶನ ನೀಡುವುದು ಇಂದು ಸಾಮಾನ್ಯ ವಿಷಯವೆನಿಸಿದೆ. 26 ತಾಸಿಗೂ ಹೆಚ್ಚು ಕಾಲ ಒಂದೇ ತಾಣದಲ್ಲಿ ಆಸೀನರಾಗಿ ಅಪಾರ ಸಂಖ್ಯೆಯ ಜನರಿಗೆ ದರ್ಶನಾನಂದ ನೀಡಿರುವ ದಾಖಲೆಗಳೂ ಇವೆ. "ನಿತ್ಯವೂ ಹೀಗೆ ಜನರನ್ನು ಭೇಟಿಮಾಡುವುದು ನಿಮಗೆ ಬೇಸರವಾಗುವುದಿಲ್ಲವೆ? ದಣಿವಾಗುವುದಿಲ್ಲವೆ?" ಎಂದು ಜನ ಕೇಳಿದಾಗಲೆಲ್ಲಾ ಅಮ್ಮ ಮುಗುಳ್ನಕ್ಕು, "ಪ್ರೇಮ ಇರುವಲ್ಲಿ ದಣಿವು ಎಂಬುದಿಲ್ಲ. ಸ್ವಂತ ತಾಯಿಗೆ ತನ್ನ ಮಗುವಿನ ಲಾಲನೆ ಪಾಲನೆ ಬೇಸರವಾಗುವುದೆ?" ಎಂದೇ ನುಡಿಯುವರು.

ದರ್ಶನ ಪಡೆದ ವಿದೇಶಿಯರು, "ಅಮ್ಮನ ದರ್ಶನವು ನಮ್ಮಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ಉಂಟುಮಾಡುತ್ತದೆ. ಹೃದಯವು ಹೂವಿನಂತೆ ಅರಳಿ, ನಮ್ಮ ಅಂತರಂಗದಲ್ಲಿರುವ ದಿವ್ಯತೆ ನಮಗೆ ವೇದ್ಯವಾಗುತ್ತದೆ. ಭಾಷೆ ತಿಳಿಯದಿದ್ದರೇನು? ಪ್ರೇಮವೇ ನಮ್ಮ ಭಾಷೆ," ಎನ್ನುವರು.

ಕಾಲಕ್ರಮೇಣ 'ಅಂತರಂಗ ಬಹಿರಂಗಗಳಲ್ಲಿ ಇರುವುದು ಒಂದೇ ದಿವ್ಯ ಚೈತನ್ಯ' ಎಂಬ ಬೋಧ ಜಾಗ್ರತವಾಗುತ್ತದೆ. ಅಮೆರಿಕಾ, ಯೂರೋಪ್, ಆಸ್ಟ್ರೇಲಿಯಾ ಮೊದಲಾಗಿ ಎಲ್ಲ ಕಡೆಗಳಲ್ಲಿ ಇಂಥ ಸಕಾರಾತ್ಮಕ ಪರಿವರ್ತನೆಯನ್ನು ನಾವಿಂದು ಕಾಣಬಹುದು. ಅನೇಕ ಜನ ಮಾದಕವಸ್ತು ಸೇವಿಸುವವರೂ, ಮದ್ಯ ವ್ಯಸನಿಗಳೂ, ಖಿನ್ನರೂ, ಅಪರಾಧಿಗುಣ ಇರುವವರೂ ಆಂತರಿಕವಾಗಿ ಪರಿವರ್ತನೆ ಹೊಂದಿ, ಪ್ರೇಮಕರುಣೆಗಳೆಂಬ ಸದ್ಗುಣಗಳನ್ನು ತಮ್ಮದಾಗಿಸಿಕೊಳ್ಳುತ್ತಿರುವುದು ಗತಕಾಲದ ಕಥೆಯಲ್ಲ; ಅಮ್ಮನ ಸಾನ್ನಿಧ್ಯದಲ್ಲಿ ನಿತ್ಯ ನಡೆದಿರುವ ಕ್ರಿಯೆ.

ಮಳೆಹನಿಗಳನ್ನು ಎಣಿಸಲಾಗದು; ಹಾಗಿದ್ದೂ, ಇದುವರೆಗೂ ಅಮ್ಮ 3 ಕೋಟಿ 60 ಲಕ್ಷಕ್ಕೂ ಹೆಚ್ಚು ಜನರಿಗೆ ದರ್ಶನಾಲಿಂಗನ ನೀಡಿದ್ದಾರೆ ಎಂದು ಅಂದಾಜು ಮಾಡಬಹುದು.



'ಆಧ್ಯಾತ್ಮವು ನಮಗೆ ಜೀವನವನ್ನು ಮ್ಯಾನೇಜ್ ಮಾಡಲು ಕಲಿಸುತ್ತದೆ. ಈಜು ಬಲ್ಲವನು ಸಮುದ್ರಕ್ಕಿಳಿದರೆ ಆನಂದಿಸಬಲ್ಲ; ಈಜು ಬಾರದವನು ಹೆದರಿ ಮುಳುಗುವನು. ಆಧ್ಯಾತ್ಮ ತತ್ವಗಳನ್ನು ಅರಿತವರು ಸಮಸ್ಯೆಗಳು ಎದುರಾದಾಗ ಸೋಲದೆ, ಜೀವನವನ್ನು ಸುಗಮವಾಗಿ ನಡೆಸಬಲ್ಲರು.'

## ಆಧ್ಯಾತ್ಮ ಜೀವನ

ಅಮ್ಮ ಭಜನೆಗೆ ಹೆಚ್ಚು ಮಹತ್ವ ಕೊಡುತ್ತಾರೆ. 'ಸಂಗೀತವು ಒಂದು ದೈವಿಕ ಕಲೆ. ಅದು ಹಾಡುವವರಿಗೂ, ಕೇಳುವವರಿಗೂ ಒಳಿತು ಮಾಡುತ್ತದೆ. ಮನಸ್ಸಿನ ಏಕಾಗ್ರತೆಗೂ, ಮನಃಶಾಂತಿಗೂ, ವಾತಾವರಣಕ್ಕೂ, ಪರಮಾತ್ಮನ ಅನುಭೂತಿಗೂ ಸಹ –ಭಜನೆಯಿಂದ ಲಾಭವಿದೆ' ಎನ್ನುವ ಅಮ್ಮ, ಪ್ರತಿದಿನವೂ ತತ್ತ್ವಪೂರಿತವೂ ಭಾವಪ್ರಧಾನವೂ ಆದ ಭಜನೆಗಳನ್ನು ಹಾಡುತ್ತಾರೆ. ಬಾಲಕಿಯಾಗಿ ಅಮ್ಮ ನೀಲಾಕಾಶದಲ್ಲಿಯೂ ಕಾರ್ಮೇಘದಲ್ಲಿಯೂ ಇಷ್ಟದೈವನ ರೂಪವನ್ನು ಭಾವಿಸಿಕೊಳ್ಳುತ್ತಾ, ತೀರಕ್ಕೆ ಬಡಿಯುವ ಸಮುದ್ರದ ಅಲೆಗಳೊಂದಿಗೆ ಆಟವಾಡುತ್ತಾ, ಮಾತೃಭಾಷೆ ಮಲಯಾಳದಲ್ಲಿ ಭಾವಪ್ರಧಾನ ಭಜನೆ ಹಾಡುತ್ತಾ, ಪ್ರಕೃತಿಯೊಂದಿಗೆ ತಾದಾತ್ಮ್ಯಭಾವದಲ್ಲಿ ದಿನಗಳನ್ನು ಕಳೆಯುತ್ತಿದ್ದರು. ಇಂದು ಭಜನೆಯ ಮೂಲಕ ಎಲ್ಲ ಕೇಳುಗರನ್ನು ಭಕ್ತಿರಸದಲ್ಲಿ ಮುಳುಗಿಸುತ್ತಾರೆ; ಭಾರತದ ಎಲ್ಲಾ ಮುಖ್ಯಭಾಷೆಗಳಲ್ಲಿ, ಆಫ್ರಿಕಾದ ಸ್ವಾಹಿಲಿ ಮೊದಲುಗೊಂಡು ಜಗತ್ತಿನ ಅನೇಕ ಭಾಷೆಗಳಲ್ಲಿ ಅಮ್ಮ ಭಜನೆ ಹಾಡುವುದು ಲೌಕಿಕವಾಗಿ ಸಹ ಒಂದು ಅದ್ಭುತ ಮೈಲಿಗಲ್ಲು ಎನ್ನಬಹುದು.

## ಅಮೃತವರ್ಷಂ

ಅಮ್ಮನ ಜನ್ಮದಿನಾಚರಣೆ 'ಅಮೃತವರ್ಷಂ' ಎಂದರೆ, ಹೊಸಾ ಸೇವಾಯೋಜನೆಗಳನ್ನು ಲೋಕಾರ್ಪಣೆ ಮಾಡುವ, ಹಾಲಿ ಯೋಜನೆಗಳನ್ನು ವಿಸ್ತರಿಸುವ ಸುದಿನ. ಬಡ ವಧೂವರರಿಗೆ ಉಚಿತ ಸಾಮೂಹಿಕ ವಿವಾಹ, ಒಡವೆ ವಸ್ತ್ರದಾನಗಳ ಪುಣ್ಯದಿನ.